# ಕರ್ನಾಟಕ ಸಂಗೀತದ ದಿಗ್ಗಜರು

● ಸರಸ್ವತಿ ವಿಜಯನಾರಸಿಂಹ

ಹಾಡುವುದು ಒಂದು ಕಲೆ. ಮಾನವ ತನ್ನ ವಾಕ್ ಸಾಮರ್ಥ್ಯವನ್ನು ಬೆಳೆಸಿಕೊಂಡಂತೆ, ಅದರಲ್ಲಿನ ಸಾಧ್ಯತೆಗಳ ಅರಿವು ಮೂಡಿದಂತೆ, ಅವನು ಪ್ರಕೃತಿಯ ಶಬ್ದಗಳನ್ನು ಅನುಕರಿಸಲು ಪ್ರಯತ್ನ ಮಾಡಿದಾಗ ಸಂಗೀತ ಪ್ರಾರಂಭವಾಯಿತು ಎಂಬುದು ಕೆಲವರ ಮತ. ಭಾರತೀಯ ಪರಂಪರೆಯಂತೆ ಸಂಗೀತ ಅಥವಾ ಸಮ್ಯಕ್ ಗೀತ ದೇವರಿಂದ ಬಂದಂತಹ ಕೊಡುಗೆ. ಈ ಜಗತ್ತಿನ ಸೃಷ್ಟಿಯೇ ಓಂಕಾರದ ಧ್ವನಿಯಿಂದ ಪ್ರಾರಂಭವಾಯಿತು, ಹಾಗೂ ಎಲ್ಲ ಶಬ್ದಗಳೂ ಅದರಲ್ಲೇ ಉದಯಿಸಿ, ಲಯ ಹೊಂದುತ್ತವೆ ಎಂದು ಒಂದು ಅಭಿಪ್ರಾಯ. ಸರಸ್ವತಿ ಸಂಗೀತದ ಅಧಿದೇವತೆ. ಭಕ್ತಿ ಪ್ರಧಾನವಾದ, ಲಯಬದ್ಧವಾದ ಹಾಗೂ ಸರಿಯಾದ ಪ್ರಮಾಣದಲ್ಲಿ ರಾಗ. ತಾಳಗಳನ್ನು ಬಳಸುವ ಕಲೆಯೇ ಸಂಗೀತ. ಸಂಗೀತದ ಸಾಧನೆಯಲ್ಲಿ ತ್ಯಾಗ ನಿಷ್ಠೆಗಳು ಬೇಕು. ಆಗ ಮಾತ್ರ ಅದರಲ್ಲಿ ಸ್ವರಶುದ್ಧತೆ ಹಾಗೂ ಘನತೆ ಸಾಧ್ಯವಾಗುವುದು. ಆದ್ದರಿಂದ ಅಂತಹ ಸಾಧನೆಯನ್ನು ಉಪಾಸನೆಯೆಂದೇ ಕರೆದಿದ್ದಾರೆ. ಸಂಗೀತೋಪಾಸಕ, ಕಲೋಪಾಸಕ ಎಂದು ಪ್ರಚಲಿತ ಬಿರುದುಗಳಿವೆ. ಮನುಷ್ಯನ ಆತ್ಮೋನ್ನತಿಗೆ ದಿವ್ಯಸೋಪಾನ ಸಂಗೀತ ಎಂದು ಹೇಳಬಹುದು. ನಾದೋಪಾಸನೆ ಎಂದೇ ಸಂಗೀತವನ್ನು ಪರಿಗಣಿಸಲಾಗಿದೆ.

ಭಾರತೀಯ ಸಂಗೀತದ ಮೂಲ ಒಂದೇ ಆದರೂ ಅದು ಕಾಲ ಕ್ರಮೇಣ ಎರಡು ಸ್ಪಷ್ಟವಾದ ಕವಲುಗಳಲ್ಲಿ ಬೆಳೆದು ಬಂದಿದೆ. ಆಗಾಗ ದಾಳಿ ಮಾಡಿದ ರಾಜರೊಂದಿಗೆ ಅವರ ಸಂಸ್ಕೃತಿಯ ಪ್ರಭಾವವೂ ಉಂಟಾಗಿ ಉತ್ತರ ಭಾರತದಲ್ಲಿ ಹಿಂದೂಸ್ಥಾನಿ ಪದ್ಧತಿಯೆಂಬ ವಿಶೇಷ ಶೈಲಿಯೇ ರೂಪುಗೊಂಡಿತು. ಇದರಲ್ಲಿ ರಾಗಪ್ರಧಾನವಾದ ಆಲಾಪ್ ಹಾಗೂ ಸ್ವರಶುದ್ಧತೆಗೇ ಪ್ರಾಶಸ್ತ್ಯ. ಭಕ್ತಿಪ್ರಧಾನವಾದ ಸಾಹಿತ್ಯಕ್ಕೆ ಕರ್ನಾಟಕ ಸಂಗೀತ ವಿಶೇಷ ಮಾನ್ಯತೆ ನೀಡುತ್ತದೆ. ಕರ್ನಾಟಕ ಎಂದರೆ ಪ್ರಾಚೀನ ಎಂಬುದೊಂದು ಅರ್ಥವಿದೆ. ಶಾಸ್ತ್ರೀಯ ಸಂಗೀತಕ್ಕೆ ಹಿಂದಿನಿಂದಲೂ ಕರ್ನಾಟಕದಲ್ಲಿ ರಾಜಾಶ್ರಯ ದೊರೆತು ಅನೇಕಾನೇಕ ಸಂಗೀತಗಾರರೂ, ಸಾಹಿತಿಗಳೂ ಬೆಳಕಿಗೆ ಬಂದಿದ್ದಾರೆ. ಮೈಸೂರಿನ ರಾಜವಂಶದವರು ದಾರ್ಶನಿಕರಾಗಿ, ಸ್ವತಃ ಸಂಗೀತಗಾರರಾಗಿ ಕಲಾವಿದರನ್ನು ಪೋಷಿಸಿದ್ದಾರೆ; ಆ ಮೂಲಕ ತಮ್ಮ ವರ್ಚಸ್ಸನ್ನೂ ಹೆಚ್ಚಿಸಿಕೊಂಡಿದ್ದಾರೆ. ರಾಜಾಶ್ರಯ ಪಡೆದ ಸಂಗೀತಗಾರರು ಹಾಡುಗಾರಿಕೆಯಲ್ಲಿ ಮಾತ್ರವಲ್ಲದೆ ವೀಣೆ, ಪಿಟೀಲು ಮೊದಲಾದ ವಾದ್ಯಗಳಲ್ಲೂ ಪರಿಣತಿ ಪಡೆದು ಜಗನ್ಮಾನ್ಯರಾಗಿದ್ದಾರೆ.

ಸಂಗೀತದಲ್ಲಿ ಗಾಯನ ಹಾಗೂ ವಾದ್ಯಸಂಗೀತ ಎರಡೂ ಸೇರಿಕೊಳ್ಳುತ್ತವೆ. ವಾದ್ಯಗಳಲ್ಲಿ ಹಲವು ವಿಧ: ತಂತಿವಾದ್ಯ, ಸುಷಿರ ಹಾಗೂ ತಾಳವಾದ್ಯಗಳು. ತಂತಿವಾದ್ಯಗಳಲ್ಲಿ ಅತಿ ಮುಖ್ಯವಾದುದು ವೀಣೆ. ವೀಣೆಯನ್ನು ಪ್ರಧಾನ ವಾದ್ಯವಾಗಿ ಬಳಸಿದ ಕೀರ್ತಿ ಕರ್ನಾಟಕ ಸಂಗೀತಕ್ಕೆ ಲಭಿಸಬೇಕು. ವೀಣೆಯಲ್ಲಿ ಸಾಧ್ಯವಾಗುವ ಗಮಕ ಹಾಗೂ ಪಲುಕುಗಳು ಕಂಠವನ್ನು ಅತ್ಯಂತ ಸಮರ್ಪಕವಾಗಿ ಅನುಸರಿಸುತ್ತವೆ. ವೀಣಾವಾದಕರು ತಮ್ಮ ವೀಣೆಯ ಮೂಲಕ ಮನುಷ್ಯನ ಹೃದಯವನ್ನೇ ನುಡಿಸುತ್ತಿದ್ದರು, ನೀರಾಗಿಸುತ್ತಿದ್ದರು. ವೀಣೆಯಲ್ಲಿ ವಿಶೇಷ ಪರಿಣತಿ ಪಡೆದು ರಾಜಾಶ್ರಯವನ್ನೂ ಪಡೆದಿದ್ದ ಹಲವು ಮಹನೀಯರೆಂದರೆ, ವೀಣೆ ಲಕ್ಷ್ಮೀನಾರಣಪ್ಪ, ವೀಣೆ ವೆಂಕಟಸುಬ್ಬಯ್ಯ, ವೀಣೆ ಶೇಷಣ್ಣ, ವೀಣೆ ಶಿವರಾಮಯ್ಯ ಹಾಗೂ ವೀಣೆ ವೆಂಕಟಗಿರಿಯಪ್ಪ. ಸಂಗೀತಗಾರರಿಗೆ ರಾಜಾಶ್ರಯ ವನ್ನು ನೀಡಿದ ರಾಜರು ತಾವೇ ಸ್ವತಃ ಸಂಗೀತದಲ್ಲಿ ಅಪಾರ ಒಲವು ಉಳ್ಳವರಾಗಿದ್ದರು. ನಮ್ಮ ಗಮನ ಸೆಳೆಯುವ ಕೆಲವು ಮಹನೀಯರ ಕಿರುಪರಿಚಯ ಇಲ್ಲಿದೆ.

**ಮುಮ್ಮಡಿ ಕೃಷ್ಣರಾಜ ಒಡೆಯರ್** : ಇವರು ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಅಪಾರ ಒಲವು ಹೊಂದಿದ್ದರು. ಪ್ರಸಿದ್ಧ ವಿದ್ವಾಂಸರು, ಕವಿಗಳು, ಶಿಲ್ಪಿಗಳು ಹಾಗೂ ಸಂಗೀತಗಾರರು ಇವರ ಆಶ್ರಯದಲ್ಲಿ ತಮ್ಮ ಕಲೆಯನ್ನು ಬೆಳಗಿದ್ದಾರೆ. ಕುಣಿಗಲ್ ರಾಮಾಶಾಸ್ತ್ರಿ, ಸೋಸಲೆ ಗರಳಪುರಿ ಶಾಸ್ತ್ರಿ, ಅಳಿಯ ಲಿಂಗರಾಜ, ಕೆಂಪುನಾರಾಯಣ, ದೇವಚಂದ್ರ, ದೇವಲಾಪುರದ ನಂಜುಂಡ ಮತ್ತು ಬಸಪ್ಪ ಶಾಸ್ತ್ರಿ ಮೊದಲಾದವರು ಇವರಲ್ಲಿ ಆಶ್ರಯ ಪಡೆದು ಬೆಳಕಿಗೆ



ಬಂದವರು. ಒಡೆಯರು ಕನ್ನಡದಲ್ಲಿ ಹೇರಳವಾಗಿ ಕೃತಿರಚನೆ ಮಾಡಿದ್ದಾರೆ. ಕನ್ನಡ ಮತ್ತು ಸಂಸ್ಕೃತದಲ್ಲಿ ಸುಮಾರು ೫೯ ಗ್ರಂಥಗಳು ಇವರ ಹೆಸರಿನಲ್ಲಿದ್ದು ಇವರ ವಿದ್ವತ್ತು ಮತ್ತು ಪ್ರತಿಭೆಗೆ ಸಾಕ್ಷಿ ನೀಡುತ್ತವೆ.

ಕಳೆದ ಶತಮಾನದಲ್ಲಿ ಕರ್ನಾಟಕ ಸಂಗೀತಕ್ಕೆ ಮೈಸೂರು ರಾಜರ ಪೋಷಣೆ ದೊರೆತದ್ದಲ್ಲದೆ ಅದರ ವಿಶೇಷ ಉಪಾಸನೆಯ ಮೂಲಕ ಖ್ಯಾತರಾಗಿಸಿ ಕೀರ್ತಿಶೇಷರಾದವರು ಹಲವು ಕಲೆಗಾರರು. ಅವರಲ್ಲಿ ಕೆಲವರ ಪರಿಚಯವನ್ನು ಮಾಡಿಕೊಟ್ಟಿರುವ ಬೆಂಗಳೂರಿನ ಶ್ರೀಮತಿ ಸರಸ್ವತಿಯವರು ಚಲನಚಿತ್ರರಂಗದಲ್ಲಿ ಖ್ಯಾತರಾದ ದಿವಂಗತ ವಿಜಯನಾರಸಿಂಹ ಅವರ ಧರ್ಮಪತ್ನಿ.

**ಜಯಚಾಮರಾಜೇಂದ್ರ ಒಡೆಯರ್** : ಮೈಸೂರಿನ ಕೊನೆಯ ಅರಸರಾದ ಜಯಚಾಮರಾಜ ಒಡೆಯರ್ ದಾರ್ಶನಿಕರು ಮತ್ತು ಸಂಗೀತಜ್ಞರು. ಪ್ರತಿದಿನವೂ ಇವರು ಪ್ರಾತಃಕಾಲದ ಶಿವಪೂಜೆಗೆ ಸರದಿಯ ಪ್ರಕಾರ ಆಸ್ಥಾನ ವಿದ್ವಾಂಸರನ್ನು ನೇಮಿಸಿ ಕೊಳ್ಳುತ್ತಿದ್ದರು. ಈ ಕಾರ್ಯಕ್ರಮ ಮುಂಜಾವಿನ ಐದು ಘಂಟೆಯಿಂದ ಹತ್ತು ಘಂಟೆಯವರೆಗೂ ನಡೆಯುತ್ತಲಿತ್ತು. ಒಮ್ಮೊಮ್ಮೆ ಈ ಕಾರ್ಯಕ್ರಮ ಉಷಃಕಾಲದ ೩-೪ ಘಂಟೆಯಿಂದಲೆ ಪ್ರಾರಂಭವಾಗುತ್ತಿತ್ತು; ಆಗ ಭಕ್ತಿಯ ಹೊನಲೇ ಅಲ್ಲಿ ಹರಿಯುತ್ತಿತ್ತು. ಭಾವುಕ ಸಂಗೀತಗಾರರೊಂದಿಗೆ ಒಡೆಯರ ಹೃದಯವೂ ಬೆರೆತು ಕಾಲದ ಪರಿವೆಯೇ ಇರುತ್ತಿರಲಿಲ್ಲ.



ಜಯಚಾಮರಾಜ ಒಡೆಯರ್ ನೂರು ಕೃತಿಗಳವರೆಗೂ ರಚಿಸಿದ್ದಾರೆ. ಸಂಸ್ಕೃತದಲ್ಲಿ ರಚಿಸಿರುವ ಈ ಕೃತಿಗಳಿಗೆ ಅವರೇ ಸ್ವತಃ ಸಂಗೀತವನ್ನೂ ಸಂಯೋಜಿಸಿದ್ದಾರೆ. 'ಶ್ರೀಮಹಾಗಣಪತಿಂ ಭಜೇಹಮ್', 'ಲಂಬೋದರ ಪಾಹಿ ಮಾಂ', 'ಬ್ರಹ್ಮಾಂಡ ವಲಯೇ ಮಾಯೆ', 'ಸರಸ್ವತೀಂ ಭಗವತೀಂ ನಮಾಮ್ಯಹಂ', 'ಪನ್ನಗಶಯನ ಪರಿಪಾಹಿ ಮಾಂ', 'ಶಿವ ಶಿವ ಶಿವ ಭೋ'— ಇವು ಇವರ ರಚನೆಗಳಲ್ಲಿ ಕೆಲವು. ಈಗ ಬಳಕೆಯಲ್ಲಿರುವ ರಾಗಗಳಲ್ಲದೆ 'ಬೃಹಸ್ಪತಿಪ್ರಿಯ' ಮುಂತಾದ ನೂತನ ರಾಗಗಳನ್ನೂ ಇವರು ಸೃಜಿಸಿದ್ದಾರೆ. ಇವರ ಕೃತಿಗಳು ನಾದಮಾಧುರ್ಯಕ್ಕೆ, ಅರ್ಥಾಭಿವ್ಯಕ್ತಿಗೆ ಹೆಸರಾಗಿವೆ. ಹೆಚ್ಚು ಪ್ರಚಲಿತವಲ್ಲದ ಕೋಕಿಲಪ್ರಿಯ, ಮಾಳವಿ, ವಾಗಧೀಶ್ವರಿಯಂತಹ ರಾಗಗಳಲ್ಲಿ ರಚನೆಗಳನ್ನು ಮಾಡಿದ ಗೌರವ ಇವರಿಗೆ ಸಲ್ಲುತ್ತದೆ. ಕೃತಿಗಳ ಸಾಹಿತ್ಯವು ಸಂಸ್ಕೃತದಲ್ಲಿದೆ. 'ಶ್ರೀವಿದ್ಯಾ' ಇವರ ಅಂಕಿತ. ರಚನೆಗಳಲ್ಲಿ ರಾಗಗಳ ಹೆಸರನ್ನು ಅರ್ಥಪೂರ್ಣವಾಗಿ ಸೇರಿಸಿರುವುದನ್ನು ಕಾಣಬಹುದು. ಇವರ ಸಾಹಿತ್ಯವನ್ನು ಅತ್ಯುತ್ಕೃಷ್ಟವಾದ ದೀಕ್ಷಿತರ ಸಾಹಿತ್ಯಕ್ಕೆ ಹೋಲಿಸಬಹುದು.

ಪಾಶ್ಚಾತ್ಯ ಸಂಗೀತದಲ್ಲೂ ಇವರಿಗೆ ವಿಶೇಷ ಆಸಕ್ತಿ ಇತ್ತು. ಭಾರತದಲ್ಲೇ ಅತಿ ದೊಡ್ಡದಾದ ಗ್ರಂಥಭಂಡಾರವನ್ನು ಅರಮನೆಯಲ್ಲಿ ಹೊಂದಿದ್ದರು. ವಿಶ್ವದ ಹೆಸರಾಂತ ಸಂಗೀತಗಾರರೊಂದಿಗೆ ಇವರ ಸಂಪರ್ಕವಿತ್ತು. ಜರ್ಮನಿಯ ರಿಚರ್ಡ್ ವ್ಯಾಗ್ನರ್, ಫಾನ್ ಬೀತೋವನ್, ಇವರ ಮೆಚ್ಚಿನ ಸಂಗೀತಗಾರರು.

ತತ್ತ್ವಶಾಸ್ತ್ರದಲ್ಲೂ ಇವರಿಗೆ ವಿಶೇಷ ಆಸಕ್ತಿ ಇತ್ತು. ವೇದ, ಉಪನಿಷತ್ತು, ಪುರಾಣ—ಇವುಗಳನ್ನು ಸರಳವಾದ ಕನ್ನಡದಲ್ಲಿ ಅರ್ಥದೊಂದಿಗೆ ಪ್ರಕಟಿಸಿ ಸಾಮಾನ್ಯ ಜನರಿಗೆ ಮನದಟ್ಟು ಮಾಡಿಸುವ ಪ್ರಯತ್ನ ಮಾಡಿದ್ದಾರೆ. 'ಆತ್ಮ ಮತ್ತು ಬ್ರಹ್ಮ' *The Religion and the Man*, *The Gita and Indian Culture*, 'ಭಾರತೀಯ ಸೌಂದರ್ಯಶಾಸ್ತ್ರದ ಹಲವು ಮುಖಗಳು' ಎಂಬ ಕೃತಿಗಳು ಇವರ ಲೇಖನಿಯಿಂದ ಮೂಡಿಬಂದವು. *Dattatreya the Way and the Goal*—ಇವರು ರಚಿಸಿರುವ ಉತ್ಕೃಷ್ಟ ಗ್ರಂಥ. ಇದಕ್ಕೆ ಭಾರತದ ರಾಷ್ಟ್ರಪತಿಗಳಾಗಿದ್ದ ಡಾ. ಎಸ್. ರಾಧಾಕೃಷ್ಣನ್ ಮುನ್ನುಡಿ ಬರೆದಿದ್ದಾರೆ.

**ಮೈಸೂರು ವಾಸುದೇವಾಚಾರ್ಯರು** : ಇವರು ಹತ್ತೊಂಬತ್ತನೆ ಶತಮಾನದ ಪ್ರಮುಖ ವಾಗ್ಗೇಯಕಾರರು. ಸಂಗೀತ, ಸಾಹಿತ್ಯ ಎರಡರಲ್ಲೂ ಸವ್ಯಸಾಚಿ ಎನಿಸಿಕೊಂಡವರು. ಇವರ ತಂದೆ ಸುಬ್ರಹ್ಮಣ್ಯ ಆಚಾರ್ಯರು, ತಾಯಿ ಕೃಷ್ಣಾಬಾಯಿ. ೧೮೬೫ರಲ್ಲಿ ಇವರು ಮೈಸೂರಿನಲ್ಲಿ ಜನಿಸಿದರು. ಇವರ ತಾಯ್ತಂದೆಯರು ಕಾನಕಾನಹಳ್ಳಿಯಿಂದ ಬಂದವರಾದ್ದರಿಂದ ಇವರಿಗೆ ಕಾನಕಾನಹಳ್ಳಿ ವಾಸುದೇವಾಚಾರ್ಯರೆಂಬ ಹೆಸರೂ ಇತ್ತೆಂದು ತಿಳಿಯುತ್ತದೆ.



ಮೈಸೂರು ಮಹಾರಾಜರ ಸಂಸ್ಕೃತ ಪಾಠಶಾಲೆಯಲ್ಲಿ ಇವರ ವ್ಯಾಸಂಗ ಹಾಗೂ ಸಾಹಿತ್ಯ ಕೃಷಿ ಆರಂಭವಾಯಿತು. ಸಂಗೀತದಲ್ಲಿದ್ದ ಇವರ ವಿಶೇಷ ಆಸಕ್ತಿಯನ್ನು ಬೆಳೆಸಿ ಪೋಷಿಸಿದವರು ಅರಮನೆಯ ವಿದ್ವಾಂಸರಾಗಿದ್ದ ಸುಬ್ಬರಾಯರು ಹಾಗೂ ವೀಣೆ ಪದ್ಮನಾಭಯ್ಯನವರು. ಬಾಲ್ಯದಲ್ಲೇ ಸಂಗೀತ ಪಾಠದ ತಳಹದಿ ಸುಭದ್ರವಾದನಂತರ ಇವರ ಸಂಗೀತದ ಉನ್ನತ ವ್ಯಾಸಂಗ ತಿರುವಯ್ಯಾರಿನ ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಅವರ ಬಳಿ ನಡೆಯಿತು. ಆರು ವರ್ಷಗಳ ಕಾಲ ತಿರುವಯ್ಯಾರಿನಲ್ಲಿದ್ದು ಗುರುಗಳ ಪಟ್ಟಶಿಷ್ಯರಾಗಿ ಸಂಗೀತದ ಎಲ್ಲ ವಿಭಾಗಗಳಲ್ಲೂ ಪರಿಣತಿ ಪಡೆದರು.

ವಾಸುದೇವಾಚಾರ್ಯರು ಭೈರವಿ ಕೆಂಪೇಗೌಡರೊಂದಿಗೆ ತಿರುವಯ್ಯಾರಿನ ಗುರುಕುಲದಲ್ಲಿ ವಿದ್ಯೆ ಕಲಿತವರೆಂದೂ ತಿಳಿದು ಬರುತ್ತದೆ. ನಂತರ ಯುವರಾಜ ಚಾಮರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿ ಅರಮನೆ ಸೇರಿದರು.

"ವಾಸುದೇವ ಕೀರ್ತನಮಂಜರಿ" ಎಂಬ ಕೃತಿಯಲ್ಲಿ ಇವರು ರಚಿಸಿರುವ ೧೫೦ ಕೀರ್ತನೆಗಳು ಎರಡು ಸಂಪುಟಗಳಲ್ಲಿ

ಪ್ರಕಟಗೊಂಡಿವೆ. "ನವರತ್ನರಾಗಮಾಲಿಕಾ" ಎಂಬುದರಲ್ಲಿ ಆಚಾರ್ಯರ ಒಂಬತ್ತು ರಾಗಮಾಲಿಕಾ ರಚನೆಗಳಿವೆ. ವಾಸುದೇವಾಚಾರ್ಯರು ಬಿಡಾರಂ ಕೃಷ್ಣಪ್ಪ, ವೀಣೆ ಶೇಷಣ್ಣ ಹಾಗೂ ವೀಣೆ ಸುಬ್ಬಣ್ಣನವರ ಸಮಕಾಲೀನರು. ಇವರಿಗೆ ಸಂಸ್ಕೃತ, ತೆಲುಗು ಮತ್ತು ಸಂಗೀತಶಾಸ್ತ್ರದಲ್ಲಿ ಅಗಾಧವಾದ ಪರಿಣತಿ ಇತ್ತು. ಇವರಲ್ಲಿ ರಚನಾಕೌಶಲ ಹಾಗೂ ಆಳವಾಗಿ ವಿಮರ್ಶೆ ಮಾಡುವ ಪಾಂಡಿತ್ಯವಿತ್ತು. ಇವರು ಗಾಯನದಲ್ಲಿ ಮನೋಧರ್ಮಕ್ಕೆ ಹೆಚ್ಚು ಪ್ರಾಧಾನ್ಯ ಕೊಡುತ್ತಿದ್ದರು. ಇವರು ಅತ್ಯಂತ ಗಂಭೀರವಾಗಿ, ವೈವಿಧ್ಯಮಯವಾಗಿ, ನಿಖರವಾಗಿ ತಾನವನ್ನು ಹಾಡುತ್ತಿದ್ದರು. ಇವರ ರಾಗ ಮತ್ತು ಸಾಹಿತ್ಯದ ಸಂಯೋಜನೆ ಅತ್ಯುನ್ನತ ಮಟ್ಟದ್ದಾಗಿತ್ತು. ಇವರು ಸಂಗ್ರಹಿಸಿದ ಮೈಸೂರು ಸದಾಶಿವರಾಯರ ಹಲವು ಕೀರ್ತನೆಗಳನ್ನು ಮದರಾಸು ಮ್ಯೂಸಿಕ್ ಅಕಾಡೆಮಿಯವರು ಹೊರತಂದಿದ್ದಾರೆ. ಜಯಚಾಮರಾಜ ಒಡೆಯರ ಹಲವು ಕೃತಿಗಳನ್ನು ವಾಸುದೇವಾಚಾರ್ಯರು ಪರಿಷ್ಕರಿಸಿದ್ದಾರೆ. ತಮ್ಮ ಜೀವಿತದ ಕೊನೆಯ ಭಾಗವನ್ನು ಮದರಾಸಿನ ಕಲಾಕ್ಷೇತ್ರ ಸಂಸ್ಥೆಯ ಸೇವೆಗೆಂದೇ ಮುಡಿಪಾಗಿಟ್ಟರು. ಆ ಸಂಸ್ಥೆಯ ಉಪಾಧ್ಯಕ್ಷರಾಗಿದ್ದರು. ಶಿರೋಮಣಿ ಸಂಗೀತ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಆ ಅವಧಿಯಲ್ಲಿ ಅವರು ರಾಮಾಯಣ ಮಹಾಕಾವ್ಯದ ನೃತ್ಯರೂಪಕವನ್ನು ಮನೋಹರವಾದ ಸಂಗೀತಕ್ಕೆ ಅಳವಡಿಸಿದರು. ದೇಶವಿದೇಶಗಳಲ್ಲಿ ಜನಪ್ರಿಯತೆ ಗಳಿಸಿದ ಈ ನೃತ್ಯನಾಟಕಗಳು ಆರು ಭಾಗಗಳಲ್ಲಿವೆ.

ಭಾರತದಾದ್ಯಂತ ಸಂಚರಿಸಿ ಅನೇಕ ಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಟ್ಟು, ವಾಸುದೇವಾಚಾರ್ಯರು ಬಹಳಷ್ಟು ಬಿರುದು ಬಹುಮಾನಗಳನ್ನು ಪಡೆದರು. ಪ್ರಶಸ್ತಿಗಳು ಇವರನ್ನು ಅರಸಿ ಬಂದುವು. ಮೈಸೂರಿನ ಅರಸರು 'ಸಂಗೀತರತ್ನ', 'ಸಂಗೀತಶಾಸ್ತ್ರವಿಶಾರದ' ಎಂದು ಗೌರವಿಸಿದರು. 'ಸಂಗೀತಕಲಾನಿಧಿ' ಎಂಬ ಬಿರುದಿನಿಂದ ಮದರಾಸಿನ ಸಂಗೀತ ಅಕಾಡೆಮಿ ಇವರನ್ನು ಗೌರವಿಸಿತು. 'ಕೇಂದ್ರ ಸಂಗೀತ ನಾಟಕ ಅಕಾಡೆಮಿ'ಯಿಂದಲೂ ಪ್ರಶಸ್ತಿಗಳು ದೊರೆತವು. ಇಷ್ಟೇ ಅಲ್ಲದೆ ಅಕಾಡೆಮಿಯ ಗಣ್ಯ ಸದಸ್ಯತ್ವವೂ ಇವರಿಗೆ ದೊರೆಯಿತು. ತಮ್ಮ ಜೀವಿತಾವಧಿಯಲ್ಲಿ ಸಂಗೀತದಲ್ಲಿನ ತಮ್ಮ ಬಗೆಬಗೆಯ ಅನುಭವಗಳನ್ನು 'ನಾ ಕಂಡ ಕಲಾವಿದರು' ಮತ್ತು 'ನೆನಪುಗಳು' ಎಂಬ ಎರಡು ಪುಸ್ತಕಗಳಲ್ಲಿ ಬರೆದು ಓದುಗರೊಂದಿಗೆ ಹಂಚಿಕೊಂಡಿದ್ದಾರೆ.

**ಮೈಸೂರು ಸದಾಶಿವರಾಯರು** : ಆಂಧ್ರಪ್ರದೇಶದವರಾದ ಇವರು ತಮ್ಮ ೪೦ನೆಯ ವಯಸ್ಸಿನಲ್ಲಿ ಮೈಸೂರಿಗೆ ಬಂದು ನೆಲೆಸಿ ಸಂಗೀತಪ್ರಪಂಚದಲ್ಲಿ ಮೈಸೂರಿಗೆ ವಿಶಿಷ್ಟಸ್ಥಾನ ಗಳಿಸಿಕೊಟ್ಟವರು. ತಮ್ಮ ವಿದ್ಯಾಪ್ರತಿಭೆ ಪಾಂಡಿತ್ಯಗಳಿಂದ ಆಗಿನ ಮಹಾರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ ಗೌರವಕ್ಕೆ ಪಾತ್ರರಾಗಿ ಆಸ್ಥಾನ ವಿದ್ವನ್ಮಣಿಯಾದರು. ವಾಲಾಜಪೇಟೆ ವೆಂಕಟರಮಣ ಭಾಗವತರು ತ್ಯಾಗರಾಜರ ಪ್ರಥಮ ಹಾಗೂ ಪರಮಶಿಷ್ಯರಾಗಿದ್ದವರು. ಸದಾಶಿವರಾಯರು ವೆಂಕಟರಮಣ ಭಾಗವತರ ಶಿಷ್ಯರು. ಆಕರ್ಷಕ ನಿಲುವನ್ನೂ ತೇಜಸ್ಸನ್ನೂ ಹೊಂದಿದ್ದ ರಾಯರು ಪಾಂಡಿತ್ಯಕ್ಕೆ ತಕ್ಕ ಠೀವಿಯನ್ನೂ ಹೊಂದಿದ್ದರು. ನರಸಿಂಹದೇವರ ಉಪಾಸಕರಾದ ಇವರು 'ಕಮಲಾ ಮನೋಹರಿ' ರಾಗದಲ್ಲಿ 'ನರಸಿಂಹುಡೀ ದಯಿಂಚೆನೇ' ಎಂಬ ಕೃತಿಯನ್ನು ರಚಿಸಿ ಭಕ್ತಿಪೂರ್ವಕವಾಗಿ ಹಾಡುವುದರಲ್ಲಿ ತನ್ಮಯರಾಗುತ್ತಿದ್ದರು. ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿ ರಚಿತವಾಗಿರುವ ಇವರ ಕೃತಿಗಳು ಸಂಗೀತ, ಸಾಹಿತ್ಯ ಮತ್ತು ರಸಭಾವಗಳ ದೃಷ್ಟಿಯಿಂದ ಉತ್ಕೃಷ್ಟವಾದುವೆಂದು ಪರಿಗಣಿಸಲ್ಪಟ್ಟಿವೆ. ಇವರ ರಚನಾಶೈಲಿ ಪಾಂಡಿತ್ಯಪೂರ್ಣವಾದುದು. ಇವರು ಅಪೂರ್ವ ರಾಗಗಳಾದ ಬಲಹಂಸ, ಪೂರ್ವಷಡ್ಜ, ಚಂದ್ರಚೂಡ ಇವುಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳು ಯತಿ ಅಥವಾ ತಾಳದ ಅಂಗ, ಪ್ರಾಸ, ಭಕ್ತಿ, ರಾಗಭಾವಗಳಿಂದ ಶ್ರೀಮಂತವಾಗಿವೆ. 'ಸದಾಶಿವ' ಎಂಬ ಅಂಕಿತದಲ್ಲಿ ಇವರು ಪದವರ್ಣಗಳು, ತಿಲ್ಲಾನ ಮತ್ತು ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳನ್ನು ಹಾಡಲು ಪ್ರೌಢವಾದ ಜ್ಞಾನ ಮತ್ತು ಕಠಿಣ ಅಭ್ಯಾಸ ಅವಶ್ಯ.

ಮೈಸೂರಿನಲ್ಲಿ ರಾಮನವಮಿ ಉತ್ಸವವನ್ನು ಪ್ರಾರಂಭಿಸಿ ವಿಜೃಂಭಣೆಯಿಂದ ನಡೆಸುತ್ತಿದ್ದ ಸದಾಶಿವರಾಯರು ಉದಾರಿಗಳೂ, ದೈವಭಕ್ತರೂ ಆಗಿದ್ದರು. ಸದಾಶಿವರಾಯರ ಶಿಷ್ಯರಲ್ಲಿ ವೀಣೆ ಸುಬ್ಬಣ್ಣನವರೂ, ವೀಣೆ ಶೇಷಣ್ಣನವರೂ ಪ್ರಮುಖರು. ವೀಣೆ ಸುಬ್ಬಣ್ಣನವರು ತಮ್ಮ ಗುರುಗಳಿಗೆ ಶಾಲು ಜೋಡಿಯನ್ನೂ ಐದು ಸಹಸ್ರರೂಪಾಯಿಗಳನ್ನೂ ಅರ್ಪಿಸಿ ಗೌರವಿಸಿದ್ದರು. ಆಗಿನ ಕಾಲದಲ್ಲಿ ಇದು ಬಹಳ ಅಮೂಲ್ಯ ಕೊಡುಗೆ. ವೀಣಾವ್ಯಾಸಂಗದಲ್ಲಿ ತರಬೇತಿ ಪಡೆದ ಅನೇಕ ವೈಣಿಕರು ಮೈಸೂರಿಗೆ ಖ್ಯಾತಿ ತಂದರು. ಇವರಿಗೆ ಗುರುಸ್ಥಾನದಲ್ಲಿದ್ದು ಸರಿಯಾದ ಮಾರ್ಗದರ್ಶನ ನೀಡಿದವರು ಸದಾಶಿವರಾಯರು.

**ಬಿಡಾರಂ ಕೃಷ್ಣಪ್ಪ**: ಇವರ ತಂದೆ ವಿಶ್ವನಾಥಯ್ಯನವರು ಯಕ್ಷಗಾನ ತಂಡದೊಂದಿಗೆ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಂದಳಿಕೆ ಗ್ರಾಮದಿಂದ ಮೈಸೂರಿಗೆ ಬಂದು ಬಿಡಾರ ಹೂಡಿದರು. ಆದ್ದರಿಂದ ಈ ವಂಶಸ್ಥರು ಬಿಡಾರದವರೆಂದೇ ಹೆಸರಾದರು. ೧೮೬೬ರಲ್ಲಿ ಕೃಷ್ಣಪ್ಪನವರು ವಿಶ್ವನಾಥಯ್ಯನವರ ಎರಡನೆ ಮಗನಾಗಿ ಮೈಸೂರಿನಲ್ಲಿ ಜನಿಸಿದರು. ಎಳೆಯವರಾಗಿದ್ದಾಗಲೇ ಇವರಿಗೆ ಪಿತೃವಿಯೋಗವಾಯಿತು. ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ಅಣ್ಣ ಸುಬ್ಬರಾಯನೊಂದಿಗೆ ಕುಳಿತು ಪುಟ್ಟ ಹುಡುಗ ಕೃಷ್ಣಪ್ಪ ದೇವರನಾಮಗಳನ್ನು ಹಾಡುತ್ತಿದ್ದ. ಈ ಕಿರಿಯನ ಮಧುರ ಕಂಠದಿಂದ ಹೊರಹೊಮ್ಮುತ್ತಿದ್ದ ಭಕ್ತಿಗೀತಗಳನ್ನು ಮೆಚ್ಚಿ ಜನ ಹಣವನ್ನು ಹಾಕಿ ಹೋಗುತ್ತಿದ್ದರು. ಆ ಹಣದಿಂದ ಅಣ್ಣ ತಮ್ಮಂದಿರು ಜೀವನ ಕಳೆಯುತ್ತಿದ್ದರು. ಹುಡುಗನ ಶಾರೀರಸಂಪತ್ತಿಗೆ ಎಂಥವರೂ ಮರುಳಾಗುತ್ತಿದ್ದರು. ಇವರ ಶಾರೀರ ಮಧುರವಾಗಿಯೂ ಆಕರ್ಷಕವಾಗಿಯೂ ಇತ್ತು. ಇವರು ತ್ರಿಸ್ಥಾಯಿಯಲ್ಲೂ ಸರಾಗವಾಗಿ ಹಾಡುತ್ತಿದ್ದರು. ಪುರಂದರದಾಸರ ಕೃತಿಗಳನ್ನು ಕಚೇರಿಗಳಲ್ಲಿ ಹಾಡಲು



ಪ್ರಾರಂಭಿಸಿದ ಕೀರ್ತಿ ಇವರದ್ದು. ಶ್ರುತಿಶುದ್ಧಿ ಮತ್ತು ರಸಭಾವಗಳಿಗೆ ಬಹಳ ಮಹತ್ವ ಕೊಡುತ್ತಿದ್ದರು.

ಅರಮನೆಯವರೇ ನಡೆಸುತ್ತಿದ್ದ 'ಕರ್ನಾಟಕ ನಾಟಕ ಸಭಾ' ಎಂಬ ಸಂಘಕ್ಕೆ ಕೃಷ್ಣಪ್ಪ ೫ ರೂ. ಸಂಬಳದೊಂದಿಗೆ ಗಾಯಕನಾಗಿ ನಿಯುಕ್ತನಾದ. ತನಗೆ ಅಯಾಚಿತವಾಗಿ ದೊರೆತ ಈ ಸದವಕಾಶಕ್ಕೆ ಹುಡುಗ ಸಂತುಷ್ಟನಾದ. ಇದರ ಸದುಪಯೋಗ ಪಡೆದುಕೊಂಡ. ನಾಟಕ ಸಂಘದವರೆಲ್ಲರ ಮೆಚ್ಚುಗೆಗೆ ಪಾತ್ರನಾದ. ಅಂದಿನ ಕಾಲದಲ್ಲಿ ಹೆಸರುವಾಸಿಯಾಗಿದ್ದ ಸಾಹುಕಾರ್ ತಿಮ್ಮಯ್ಯನವರು ಈ ಹದಿಹರೆಯದ ಬಾಲಕನಿಗೆ ವೀಣೆ ಶೇಷಣ್ಣನವರಲ್ಲಿಯೂ ಆಸ್ಥಾನ ವಿದ್ವನ್ಮಣಿಗಳಾಗಿದ್ದ ಕರಿಗಿರಿ ರಾಯರಲ್ಲಿಯೂ ಶಾಸ್ತ್ರೀಯ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸಿಕೊಟ್ಟರು. ಅನತಿ ಕಾಲದಲ್ಲಿ ತಮ್ಮ ಗುರುಗಳ ಮೆಚ್ಚುಗೆ ಪಡೆದರು ಕೃಷ್ಣಪ್ಪ. ಆಗಿನ ಮಹಾರಾಜರಾಗಿದ್ದ ನಾಲ್ಮಡಿ ಕೃಷ್ಣರಾಜ ಒಡೆಯರು ಇವನ ಪ್ರತಿಭೆಗೆ ಮನಸೋತು ಆಸ್ಥಾನ ವಿದ್ವಾಂಸನನ್ನಾಗಿ ನೇಮಿಸಿದರು. ಈ ಸಂದರ್ಭದಲ್ಲಿಯೇ ಕೃಷ್ಣಪ್ಪನವರು 'ಕರ್ನಾಟಕ ನಾಟಕ ಸಭೆ'ಯ ಅಧ್ಯಕ್ಷರಾಗಿಯೂ ನೇಮಕಗೊಂಡರು. ಇವರ ಪಾಂಡಿತ್ಯ ಮನೆಮಾತಾಯಿತು. ಸನ್ಮಾನಗಳ ಪ್ರಶಸ್ತಿಗಳ ಸುಗ್ಗಿಯೋ ಸುಗ್ಗಿ. ಮಹಾರಾಜರು 'ಗಾನವಿಶಾರದ' ಎಂದು ಬಿರುದು ಕೊಟ್ಟರು. ಕೃಷ್ಣಪ್ಪನವರ ಕೀರ್ತಿ ಮೈಸೂರಿಗೆ ಮಾತ್ರವಲ್ಲದೆ ತಮಿಳುನಾಡಿಗೂ, ಆಂಧ್ರ ಪ್ರದೇಶಕ್ಕೂ ಹಬ್ಬಿತು. ಶಂಕರಾಭರಣ, ತೋಡಿ, ಭೈರವಿ ಮತ್ತು ಕಲ್ಯಾಣಿ—ಇವು ಕೃಷ್ಣಪ್ಪನವರಿಗೆ ಪ್ರಿಯವಾದ ರಾಗಗಳು. ಶ್ರೀರಾಮನ ಪರಮಭಕ್ತರಾದ ಕೃಷ್ಣಪ್ಪನವರು ೧೯೨೮ರಲ್ಲಿ ಪ್ರಸನ್ನ ಸೀತಾರಾಮ ಮಂದಿರವನ್ನು ಮೈಸೂರಲ್ಲಿ ಕಟ್ಟಿಸಿ ಶ್ರೀರಾಮನ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ಇಲ್ಲಿಯ ರಾಮೋತ್ಸವ ಇಂದಿಗೂ ಸುಪ್ರಸಿದ್ಧ. ದೇಶವಿದೇಶಗಳಲ್ಲಿ ಪರ್ಯಟನೆ ಮಾಡಿದ ಇವರ ಶಿಷ್ಯರು ಇವರ ಕೀರ್ತಿಯನ್ನು ಹರಡಿದರು. ಭಾರತದಾದ್ಯಂತ ಕೃಷ್ಣಪ್ಪನವರು ಸಂಚಾರ ನಡೆಸಿದರು. ಇವರ ಶಿಷ್ಯವೃಂದ ಅಪಾರವಾಗಿತ್ತು. ಇವರ 'ಸಂಗೀತಪಾಠಶಾಲೆ'ಯಲ್ಲಿ ಶಿಕ್ಷಣ ಪಡೆದು ಖ್ಯಾತನಾಮರಾದವರು— ಟಿ.ಚೌಡಯ್ಯನವರು, ಬಿ.ದೇವೇಂದ್ರಪ್ಪ, ರಾಳ್ಳಪಲ್ಲಿ ಅನಂತಕೃಷ್ಣ ಶರ್ಮ, ಪುಟ್ಟಸ್ವಾಮಯ್ಯ, ಶ್ರೀಮತಿ ನಾಗಮ್ಮ ಹಾಗೂ ಶ್ರೀಮತಿ ಶಾರದಮ್ಮ. ೭೫ ವರ್ಷಗಳ ಸಾರ್ಥಕ ಜೀವನ ನಡೆಸಿ ಕೃಷ್ಣಪ್ಪನವರು ೧೯೩೧ರಲ್ಲಿ ದಿವಂಗತರಾದರು. 'ಶ್ರೀಕೃಷ್ಣ' ಎಂಬ ಅಂಕಿತದಲ್ಲಿ ಹಲವು ಕೃತಿಗಳನ್ನೂ ರಚಿಸಿದ್ದಾರೆ.

**ಟಿ. ಚೌಡಯ್ಯ** : ಮೈಸೂರಿನಿಂದ ೩೦ ಕಿ.ಮೀ.ದೂರದ ತಿರುಮಕೂಡಲಿನಲ್ಲಿ ಜನಿಸಿದರು. ಇವರ ತಂದೆ ಸಂಗೀತಪ್ರಿಯರಾದ ಅಗಸ್ತ್ಯಗೌಡರು. ತಾಯಿ ಭರತನಾಟ್ಯ ಮತ್ತು ಸಂಗೀತ ಕಲಾವಿದೆಯಾಗಿದ್ದ ಸುಂದರಮ್ಮ. ಚೌಡಯ್ಯನವರಿಗೆ ಬಾಲ್ಯಶಿಕ್ಷಣ ತಾಯಿ ಸುಂದರಮ್ಮನವರಲ್ಲಿಯೇ ದೊರೆಯಿತು. ಎಳೆತನದಲ್ಲಿಯೇ ಸಂಗೀತದಲ್ಲಿ ಮಗನಿಗಿದ್ದ ಅಪಾರ ಆಸಕ್ತಿಯನ್ನು ಗುರುತಿಸಿದ ತಾಯಿ ಮಗನನ್ನು ಮೈಸೂರಿನಲ್ಲಿದ್ದ ತನ್ನ ತಮ್ಮನ ಬಳಿ ಕಳಿಸಿದಳು. ಸೋದರಮಾವ ಹುಡುಗನ ಪ್ರತಿಭೆಯನ್ನು ಬೆಳೆಸಲು ಬಿಡಾರಂ ಕೃಷ್ಣಪ್ಪನವರಲ್ಲಿಗೆ ಕಳಿಸಿದರು. ಹದಿನೆಂಟು ವರ್ಷಗಳ ಕಾಲ ಚೌಡಯ್ಯನವರು ಬಿಡಾರಂರವರ ಸಂಗೀತ ಪಾಠಶಾಲೆಯಲ್ಲಿ ಶಿಕ್ಷಣ ಪಡೆದರು. ತಮಗೆ ಪ್ರಿಯವಾದ ಪಿಟೀಲುವಾದನದಲ್ಲೂ ನುರಿತವರಾದರು, ಅದ್ವಿತೀಯರಾದರು. ೧೯೨೭ರಲ್ಲಿಯೇ ಸ್ವತಂತ್ರವಾಗಿ ಕಾರ್ಯಕ್ರಮ ನಡೆಸಿಕೊಡುವ ಮಟ್ಟಿಗೆ ಗುರುವಿನ ಕೃಪಾಶೀರ್ವಾದ ಪಡೆದರು. ಇದಕ್ಕೆ ಇವರ ಕಠಿಣ ಪರಿಶ್ರಮ ಮತ್ತು ಸಾಧನೆಯೇ ಕಾರಣ. ದಿನಕ್ಕೆ ಹದಿನಾರು ಗಂಟೆಗಳಿಗೂ ಹೆಚ್ಚಾಗಿ ಅಭ್ಯಾಸಕ್ಕೇ ಮೀಸಲಾಗಿಡುತ್ತಿದ್ದರು. ಸಂಗೀತ ದಿಗ್ಗಜರಾದ ಅರಿಯಾಕುಡಿ ರಾಮಾನುಜ ಅಯ್ಯಂಗಾರ್, ಚೆಂಬೈ ವೈದ್ಯನಾಥ ಭಾಗವತರ್, ಶೆಮ್ಮಂಗುಡಿ ಶ್ರೀನಿವಾಸ ಅಯ್ಯಂಗಾರ್, ಪಾಲಘಾಟ್ ರಾಮಭಾಗವತರ್, ಜಿ. ಎನ್.ಬಾಲಸುಬ್ರಹ್ಮಣ್ಯಂ ಮತ್ತು ಎಂ.ಎಸ್. ಸುಬ್ಬಲಕ್ಷ್ಮಿ ಮೊದಲಾದವರೂ ಇವರ ಪ್ರತಿಭೆಗೆ ಮೆಚ್ಚಿ ತಮ್ಮ ಕಚೇರಿಗೆ ಇವರ ಪಿಟೀಲು ವಾದನ ಕೋರಿ ಆಹ್ವಾನಿಸುತ್ತಿದ್ದರು.




ನಾಲ್ಕು ತಂತಿಗಳ ಪಿಟೀಲು ವಾದ್ಯವನ್ನು ಏಳು ತಂತಿಗಳಿಗೆ ಮಾರ್ಪಡಿಸಿದ ಕೀರ್ತಿ ಚೌಡಯ್ಯನವರದು. ಇವರು ತಮ್ಮ ತನಿ ಕಚೇರಿಗಳಿಂದ ಜನರ ಮನ ಸೆಳೆದಿದ್ದರು. ಇವರ ಪಿಟೀಲು ವಾದನದ ಶೈಲಿ ಅದ್ವಿತೀಯ. ಪಿಟೀಲನ್ನು ನುಡಿಸಲು ಪ್ರಾರಂಭಿಸಿದರೆ ಅದರಲ್ಲೇ ಲೀನವಾಗಿಬಿಡುತ್ತಿದ್ದರು. ಆ ತನ್ಮಯತೆ, ನಾದಪುಷ್ಟಿ, ಕೈಚಳಕ ಎಂಥವರನ್ನೂ ಅಚ್ಚರಿಪಡಿಸುವಂತಿತ್ತು. ಒಂದು ಸಲ ಕಮಾನನ್ನು ಕೆಳಗೆ ಮೇಲೆ ಮಾಡಿದರೆ ೨೫೬ ಅಕ್ಷರಗಳು ಹೊರಹೊಮ್ಮಬೇಕು ಎನ್ನುತ್ತಿದ್ದರು. ಅಂತೆಯೇ ನುಡಿಸುತ್ತಲೂ ಇದ್ದರು.

ಸನ್ಮಾನಗಳೂ ಪ್ರಶಸ್ತಿಗಳೂ ಇವರನ್ನು ಅರಸಿ ಬಂದುವು. ಮೈಸೂರು ಮಹಾರಾಜರು 'ಸಂಗೀತರತ್ನ' ಎಂದು ಗೌರವಿಸಿದರು. ೧೯೫೭ರಲ್ಲಿ ರಾಷ್ಟ್ರಪತಿಗಳು 'ರಾಷ್ಟ್ರಪ್ರಶಸ್ತಿ' ಇತ್ತು ಗೌರವಿಸಿದರು. ಮದರಾಸು ಸಂಗೀತ ಅಕಾಡೆಮಿಯಿಂದ 'ಸಂಗೀತ ಕಲಾನಿಧಿ' ಎಂಬ ಪ್ರಶಸ್ತಿಯೂ, ಮೈಸೂರಿನ ಸಂಗೀತ ಪರಿಷತ್ತಿನಿಂದ

'ಗಾನಕಲಾಸಿಂಧು' ಎಂಬ ಸನ್ಮಾನವೂ ದೊರೆಯಿತು. ಚೌಡಯ್ಯನವರು 'ತ್ರಿಮುಕುಟ' ಎಂಬ ಅಂಕಿತದಲ್ಲಿ ಅನೇಕ ಕೃತಿಗಳನ್ನೂ, ತಿಲ್ಲಾನಗಳನ್ನೂ ರಚಿಸಿದ್ದಾರೆ. ಅಯ್ಯನಾರ್ ಕಲಾಶಾಲೆಯನ್ನು ಬೆಂಗಳೂರು ಮತ್ತು ಮೈಸೂರಿನಲ್ಲಿ ಸ್ಥಾಪಿಸಿ ಸಂಗೀತಾಸಕ್ತರ ನೆರವಿಗೆ ಬಂದಿದ್ದಾರೆ. ಜೊತೆಗೆ ಇಲ್ಲಿ ಪಿಟೀಲು ವಾದನದ ಶಿಕ್ಷಣದ ವ್ಯವಸ್ಥೆಯನ್ನೂ ಮಾಡಿದ್ದಾರೆ.

'ಕರ್ನಾಟಕ ಸಂಗೀತದ ಪಿತಾಮಹ' ರೆನಿಸಿರುವ ಪುರಂದರ ದಾಸರು ಹಾಕಿಕೊಟ್ಟಿರುವ ಪದ್ಧತಿಯಲ್ಲೇ ಇಂದಿಗೂ ಕರ್ನಾಟಕ ಸಂಗೀತವನ್ನು ಎಲ್ಲರೂ ಅಭ್ಯಾಸ ಮಾಡುವುದು. ಈ ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗುವುದರಲ್ಲಿ ಕರ್ನಾಟಕದ ಕಲಾವಿದರ ಕೊಡುಗೆ ಅಮೋಘವಾದುದು. ಇಂತಹ ಕಲಾವಿದರನ್ನು ಪ್ರೋತ್ಸಾಹಿಸಿ ಪೋಷಣೆಯನ್ನು ನೀಡಿದ ನಮ್ಮ ನಾಡಿನ ಭವ್ಯ ಪರಂಪರೆಯ ಬಗ್ಗೆ ನಾವು ಬರೀ ಹೆಮ್ಮೆ ತಾಳಿದರೆ ಸಾಲದು. ಈ ಶಾಸ್ತ್ರವನ್ನು ಬೆಳೆಸಿಕೊಂಡು ಹೊಸ ಹೊಸ ಮಾಧ್ಯಮಗಳಲ್ಲಿ ಪ್ರಯೋಗ ಮಾಡಿ ಅದನ್ನು ಜನಪ್ರಿಯಗೊಳಿಸಿ ಸಮೃದ್ಧಗೊಳಿಸಬೇಕು. ಇದು ನಮ್ಮೆಲ್ಲರ ಕರ್ತವ್ಯ. ಯುವ ಪೀಳಿಗೆಯಲ್ಲಿ ಇಂದು ಅನೇಕರು ಸಂಗೀತದ ಬಗ್ಗೆ ಆಸಕ್ತಿ ವಹಿಸಿ ಅದನ್ನು ವೃತ್ತಿಯನ್ನಾಗಿ ಆಯ್ದುಕೊಂಡಿದ್ದರೂ ಸಂಗೀತ ಕಲೆಗೆ ಅವಶ್ಯವಾದ ನಿಷ್ಠೆ, ಸಂಪೂರ್ಣ ಸಮರ್ಪಣೆಗಳು ಅಪರೂಪವಾಗಿವೆ. ಹಣ, ಹೆಸರು ಹಾಗೂ ಕೀರ್ತಿಗಳೇ ಪ್ರಮುಖವಾಗಿದ್ದು, ಭಾವ ಹಾಗೂ ಭಕ್ತಿಗಳು ಹಿಂಬದಿಗೆ ತಳ್ಳಲ್ಪಟ್ಟು, ಸಂಗೀತವು ಇನ್ನು ಮುಂದೆ ಉಪಾಸನೆಯಾಗಿ ಉಳಿಯುವುದೇ ಎಂಬುದೇ ಸಂಶಯವಾಗಿದೆ. ಮನೋರಂಜನೆಗಾಗಿ ಸಂಗೀತವನ್ನು ಬಳಸಬಹುದಾದರೂ ಅದು ಮೂಲತಃ ಮನಸ್ಸಿಗೆ ಶಾಂತಿ, ನೆಮ್ಮದಿ ಹಾಗೂ ಶುದ್ಧ ರಸಾಸ್ವಾದವನ್ನು ನೀಡುವ ಅಮೃತವರ್ಷಿಣಿಯಾಗಿಯೇ ಉಳಿಯಬೇಕು. ✡



# ಪ್ರಹಸನ ಪ್ರಸಂಗ

**ಒ**ಮ್ಮೆ ರೈಲಿನಲ್ಲಿ ಪ್ರಯಾಣ ಹೊರಟಿದ್ದ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ ದಿನಪತ್ರಿಕೆಯನ್ನು ಮಾರುತ್ತಿದ್ದ ವ್ಯಕ್ತಿಯನ್ನು ಕಂಡು ಒಂದು ಪತ್ರಿಕೆಯನ್ನು ಕೊಂಡುಕೊಂಡರು. ಓದಲು ಪ್ರಾರಂಭಿಸಿದಾಗ ಕನ್ನಡಕವನ್ನು ಮನೆಯಲ್ಲೇ ಮರೆತಿರುವುದು ನೆನಪಾಯಿತು. ಪತ್ರಿಕೆಯನ್ನು ಮಾರುತ್ತಿದ್ದ ವ್ಯಕ್ತಿಯನ್ನೆ ಕೇಳಿಕೊಂಡರು, "ಅಯ್ಯಾ, ಸ್ವಲ್ಪ ಮುಖ್ಯಾಂಶಗಳನ್ನು ಓದಿ ಹೇಳುತ್ತೀಯಾ?" ಆ ವ್ಯಕ್ತಿ ಪೆಚ್ಚು ಮೋರೆ ಹಾಕಿಕೊಂಡು ಹೇಳಿದ, "ಸಾರ್, ನಿಮ್ಮಂತೆ ನನಗೂ ಓದಲು ಬರುವುದಿಲ್ಲ!"

* * * *

**ಕ**ಳ್ಳರ ಗುಂಪೊಂದು ರಾತ್ರಿ ಹೊತ್ತು ಪಹರೆಯಲ್ಲಿದ್ದ ಪೊಲೀಸ್ ಪೇದೆಯನ್ನೇ ಬೆದರಿಸಿ ಅವನ ಬಳಿಯಿದ್ದ ಕೈಗಡಿಯಾರ, ಹಣ ಎಲ್ಲವನ್ನೂ ದೋಚಿತು. ಮರುದಿವಸ ಠಾಣೆಯಲ್ಲಿ ಇನ್‌ಸ್ಪೆಕ್ಟರ್ ಸಾಹೇಬರು ವಿಚಾರಣೆ ಮಾಡುತ್ತ ಘಟನೆಯ ವಿವರಗಳನ್ನು ಕೇಳಿದರು, "ಅಲ್ಲಯ್ಯಾ, ಕಳ್ಳರು ಬಂದಾಗ ನಿನ್ನ ಬಳಿ ಪಿಸ್ತೂಲ್ ಇರಲಿಲ್ಲವೇನಯ್ಯಾ?" ಪೇದೆ ಉತ್ತರವಿತ್ತ, "ಇತ್ತು ಸಾರ್! ಬಹಳ ಜೋಪಾನವಾಗಿ ಬಚ್ಚಿಟ್ಟುಕೊಂಡಿದ್ದೆ. ಗೊತ್ತಾಗಿ ಬಿಟ್ಟರೆ ಅದನ್ನೂ ಕದ್ದುಬಿಟ್ಟಾರು ಅಂತ ಬಾಯಿ ಬಿಡಲೇ ಇಲ್ಲ!"

* * * *

ಒಬ್ಬ ದರ್ಜಿ ಮತ್ತು ಅವನ ಗಿರಾಕಿಯ ನಡುವಿನ ಸಂಭಾಷಣೆ:

**ದರ್ಜಿ**: ಇಲ್ಲ ಸಾರ್, ನಾನು ಸಭ್ಯ ಗಿರಾಕಿಯ ಬಳಿ ಎಂದೂ ಹಣ ಕೇಳುವುದಿಲ್ಲ.

**ಗಿರಾಕಿ**: ಆದರೆ ಅವನು ಹಣ ಕೊಡದೇ ಹೋದರೆ ಏನು ಮಾಡುವೆ ?

**ದರ್ಜಿ**: ಹಾಗೆ ಮಾಡಿದರೆ ಅವನು ಸಭ್ಯನಲ್ಲ ಎಂದು ತೀರ್ಮಾನಿಸಿ ಹಣ ಪಾವತಿ ಮಾಡಲು ಹೇಳುತ್ತೇನೆ!

**ತ**ಮ್ಮ ೯೯ನೆಯ ಜನ್ಮದಿನವನ್ನು ಆಚರಿಸುತ್ತಿದ್ದ ವೃದ್ಧರನ್ನು ವರದಿಗಾರನೊಬ್ಬ ಸಂದರ್ಶಿಸಲು ಪ್ರತ್ಯಕ್ಷನಾದ. ಸಂಭಾಷಣೆಯ ಅನಂತರ ಬೀಳ್ಕೊಳ್ಳುತ್ತ ಸುದ್ದಿಗಾರ ಹೇಳಿದ, "ಸಾರ್, ಮುಂದಿನ ವರ್ಷ ತಾವು ೧೦೦ ವರ್ಷಗಳು ತುಂಬಿ ಸಂತೋಷಪಡುವುದನ್ನು ಕಾಣಲು ನನಗೆ ಆಸೆ. ಆಗ ಮತ್ತೊಮ್ಮೆ ಮಾತನಾಡುವ ಅವಕಾಶ ಸಿಗುವುದೆಂದು ನಂಬಿರುವೆ." ಆ ಮುದುಕರು ಹೇಳಿದರು, "ಹ್ಞಾ! ಯಾಕಾಗಬಾರದು? ನೀನಿನ್ನೂ ಯುವಕ, ಆರೋಗ್ಯವಂತನಾಗಿಯೇ ಕಾಣುತ್ತಿದ್ದೀಯಲ್ಲಾ!"

* * * *

**ತಂ**ಗಿಯ ಆರೋಗ್ಯ ಕೆಟ್ಟಿದೆ ಎಂದು ತಿಳಿದ ಅಕ್ಕ ಅವಳ ಮನೆಗೆ ಫೋನ್ ಮಾಡಿದಾಗ, ಆ ಕಡೆಯಿಂದ ತಂಗಿಯ ೧೦ ವರ್ಷದ ಮಗಳು ಮೆಲುದನಿಯಲ್ಲಿ ಉತ್ತರಿಸಿದಳು, "ಹಲೋ!"

**ಅಕ್ಕ** : ಹಲೋ, ನಿನ್ನ ಅಮ್ಮ ಹೇಗಿದ್ದಾಳೆ?

**ಮಗಳು** (ಮತ್ತೆ ಪಿಸುಗುಟ್ಟುತ್ತ): ಮಲಗಿದ್ದಾಳೆ.

**ಅಕ್ಕ**: ಡಾಕ್ಟರ್ ಬಳಿ ಹೋಗಿದ್ದಳೆ? ಔಷಧಿ ತೆಗೆದುಕೊಳ್ಳುತ್ತಿರುವಳೇ?

**ಮಗಳು** : ಹ್ಞೂ, ಔಷಧಿ ತೆಗೆದುಕೊಂಡಳು, ಎನ್ನುತ್ತಾ ಮತ್ತೆ ಪಿಸುಗುಟ್ಟಿದಳು.

**ಅಕ್ಕ**: ಸರಿ, ಎಬ್ಬಿಸಬೇಡ, ಆಮೇಲೆ ನಾನು ಫೋನ್ ಮಾಡಿದ್ದೆ ಎಂದು ತಿಳಿಸು. ಅಂದಹಾಗೆ, ನೀನೇನು ಮಾಡುತ್ತಿರುವೆ?

**ಮಗಳು** (ಮತ್ತೆ ಮೆಲುದನಿಯಲ್ಲಿ): ನಾನು ಕಹಳೆ ನುಡಿಸುವುದನ್ನು ಅಭ್ಯಾಸಮಾಡುತ್ತಿದ್ದೀನಿ. ✡